ನಿಮ್ಮೊಡನೆ

# ವಿದ್ಯುತ್ ಅವಘಡಗಳಿಂದ ಅಮಾಯಕರ ಜೀವಹಾನಿ ಅಧಿಕಾರಿಗಳಿಂದ ಬೇಕು ಜವಾಬ್ದಾರಿಯುತ ವರ್ತನೆ

**ವಿದ್ಯುತ್ ತಂತಿಯ ಸ್ಪರ್ಶ, ಕಬ್ಬಿಣದ ಸರಳಿನಂಥವನ್ನು ಹಿಡಿದು ವಿದ್ಯುತ್ ವಾಹಕ ಮಾರ್ಗಗಳ ಬಳಿ ನಡೆದಾಡುವಾಗ ಸ್ಪರ್ಶಕ್ಕೆ ಒಳಗಾಗುವುದು – ಇಂತಹ ಅನೇಕ ಕಾರಣಗಳಿಂದ ಅವಘಡಗಳು ಸಂಭವಿಸುತ್ತವೆ. ಜನರ ತೆರಿಗೆ ಹಣದಿಂದ ಸಂಬಳ–ಸವಲತ್ತು ಪಡೆಯುವ 'ಬೆಸ್ಕಾಂ' ಸಿಬ್ಬಂದಿ ಜವಾಬ್ದಾರಿಯಿಂದ ಕಾರ್ಯವನ್ನು ನಿರ್ವಹಿಸಬೇಕಾಗಿದೆ.**




ರಾಜ್ಯದಲ್ಲಿ ವಿದ್ಯುತ್ ಅವಘಡಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ವಿದ್ಯುತ್ ಸರಬರಾಜು ಕಂಪನಿಗಳ ಹೊಣೆಗೇಡಿ ವರ್ತನೆಯಿಂದ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಸಂಬಂಧಿಸಿದ ಸಿಬ್ಬಂದಿ ಮತ್ತು ಅಧಿಕಾರಿಗಳು ತಮ್ಮ ಕೆಲಸವನ್ನು ಮತ್ತಷ್ಟು ಎಚ್ಚರದಿಂದ ಹಾಗೂ ಜವಾಬ್ದಾರಿಯಿಂದ ನಿರ್ವಹಿಸಿದರೆ ಅವಘಡಗಳನ್ನು ಕನಿಷ್ಠಮಟ್ಟಕ್ಕೆ ಇಳಿಸಬಹುದು. ಆದರೆ ಅಂತಹ ಕಾರ್ಯಕ್ಷಮತೆ ಇದುವರೆಗೂ ಸಾಧ್ಯವಾಗಿಲ್ಲ ಎಂಬುದು ಪ್ರತಿಯೊಬ್ಬರ ಅನುಭವಕ್ಕೂ ಬಂದಿರಬಹುದಾದ ಕಹಿಸತ್ಯ.

ಈ ಹಿಂದಿನ ಐದು ವರ್ಷಗಳಲ್ಲಿ, ಅಂದರೆ 2020–21ರಿಂದ 2024–25ರ ಜೂನ್ ಅಂತ್ಯದವರೆಗೆ ರಾಜ್ಯದಲ್ಲಿ 1,917 ಮಂದಿ ನಾಗರಿಕರು ವಿದ್ಯುತ್ ಅವಘಡಗಳಿಗೆ ಜೀವತೆತ್ತಿದ್ದಾರೆ. ವಿದ್ಯುತ್ ತಂತಿ, ಪರಿವರ್ತಕ ಹಾಗೂ ಉಪಕರಣಗಳ ದುರಸ್ತಿಯಲ್ಲಿ ತೊಡಗಿದ್ದ 92 ಮಂದಿ ಸಿಬ್ಬಂದಿ ಕೂಡ ವಿದ್ಯುತ್ ಆಘಾತಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ, 2,849 ಜಾನುವಾರುಗಳ ಜೀವಹರಣಕ್ಕೂ ಈ ಅವಘಡಗಳು ಕಾರಣವಾಗಿವೆ ಎಂದು ವರದಿಗಳು ಹೇಳುತ್ತವೆ. ಈ ಬಗೆಯ ದುರಂತಗಳು ಎಷ್ಟೋ ಕುಟುಂಬಗಳನ್ನು ಬೀದಿಪಾಲು ಮಾಡಿರುವ ನಿದರ್ಶನಗಳೂ ಉಂಟು.

ಬೆಸ್ಕಾಂಗೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಈ ದುರಂತಗಳ ಹಿನ್ನೆಲೆಯಲ್ಲಿ ಅವಲೋಕಿಸಬೇಕಿದೆ. 'ಬೆಸ್ಕಾಂ ಅಧಿಕಾರಿಗಳು ಅತ್ಯಂತ ಬೇಜವಾಬ್ದಾರಿ ಜನ. ದೂರು ಬಂದ ಕಡೆ ತಕ್ಷಣ ಹೋಗಿ ಸ್ಥಳ ಪರಿಶೀಲನೆ ಮಾಡುವುದಿಲ್ಲ. ಪಾದಚಾರಿಗಳ ಜೀವವನ್ನು ಇವರು ಸುಲಭವಾಗಿ ತೆಗೆಯಬಲ್ಲರು...' ಎಂದು ಅವರು ಹೇಳಿರುವುದರ ಹಿಂದೆ, ಅವಘಡಗಳಿಂದಾಗಿ ಜೀವ ಕಳೆದುಕೊಂಡವರ ಕುಟುಂಬಗಳ ನೋವು ಇಣುಕುತ್ತದೆ.

ವಿದ್ಯುತ್ ಪ್ರವಹಿಸುತ್ತಿರುವ ತಂತಿಯನ್ನು ಆಕಸ್ಮಿಕವಾಗಿ ಸ್ಪರ್ಶಿಸುವುದು, ತುಂಡರಿಸಿಬಿದ್ದ ತಂತಿ ತುಳಿಯುವುದು, ಕಬ್ಬಿಣದ ಸರಳಿನಂಥವನ್ನು ಹಿಡಿದು ವಿದ್ಯುತ್ ವಾಹಕ ಮಾರ್ಗಗಳ ಬಳಿ ನಡೆದಾಡುವಾಗ ಸ್ಪರ್ಶಕ್ಕೆ ಒಳಗಾಗುವುದು... ಇಂತಹ ಅನೇಕ ಕಾರಣಗಳಿಂದ ಅವಘಡಗಳು ಸಂಭವಿಸುತ್ತವೆ. ಭಾರಿ ಮಳೆ–ಗಾಳಿಯಿಂದ ವಿದ್ಯುತ್ ಕಂಬಗಳು ಒಂದುಕಡೆ ವಾಲಿಕೊಳ್ಳುತ್ತವೆ, ಅದರಿಂದಾಗಿ ತಂತಿ ತುಂಡರಿಸುವ ಸಾಧ್ಯತೆಯೂ ಇರುತ್ತದೆ. ಇವೆಲ್ಲ ದುರಂತಗಳಿಗೆ ಎಡೆಮಾಡಿಕೊಡುತ್ತವೆ.

ರಾಜಧಾನಿ ಬೆಂಗಳೂರಿನಲ್ಲಿ ಎಲ್ಲೆಂದರಲ್ಲಿ ವಿದ್ಯುತ್ ಪರಿವರ್ತಕಗಳನ್ನು ಅಳವಡಿಸಲಾಗಿದೆ. ಈ ಸ್ಥಿತಿ ಬೆಂಗಳೂರಿಗಷ್ಟೇ ಸೀಮಿತವಲ್ಲ. ಎಲ್ಲ ನಗರ–ಪಟ್ಟಣಗಳಲ್ಲಿಯೂ ಇದೇ ಸ್ಥಿತಿ ಇದೆ. ರಸ್ತೆ ಬದಿಗಳಲ್ಲಿ, ಪಾದಚಾರಿ ಮಾರ್ಗಗಳಲ್ಲಿ, ರಾಜಕಾಲುವೆಗಳ ಬಳಿಯೂ ವಿದ್ಯುತ್ ಪರಿವರ್ತಕಗಳು ಕಾಣಸಿಗುತ್ತವೆ. ಅನೇಕ ಕಡೆ ಜನರ ಜೀವಕ್ಕೆ ಕಂಟಕ ತರಬಲ್ಲ ಸ್ಥಿತಿಯಲ್ಲಿ ನೆಲಮಟ್ಟದಲ್ಲೇ ವಿದ್ಯುತ್ ಪರಿವರ್ತಕಗಳಿವೆ. ಕಂಬಗಳಲ್ಲಿ ಅಳವಡಿಸುವ ಹಳೆ ಮಾದರಿಯ ವಿದ್ಯುತ್ ಪರಿವರ್ತಕಗಳನ್ನು ಈಗಲೂ ಕೆಲವೆಡೆ ಕಾಣಬಹುದು. ಅವುಗಳಲ್ಲಿ ನೇತಾಡುವ ವಿದ್ಯುತ್ ತಂತಿಗಳು ಅಪಾಯಕ್ಕೆ ಆಹ್ವಾನ ನೀಡುವಂತಿರುತ್ತವೆ. ಜನರಿಗೆ ಅಪಾಯ ಉಂಟು ಮಾಡುವ ರೀತಿ ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ವಿದ್ಯುತ್ ಪರಿವರ್ತಕಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವಂತೆ 2021ರ ಏಪ್ರಿಲ್‌ನಲ್ಲಿ ಬೆಸ್ಕಾಂಗೆ ಹೈಕೋರ್ಟ್ ಸೂಚನೆಯನ್ನೂ ನೀಡಿತ್ತು. ಆದರೂ ಈ ಕೆಲಸ ಇನ್ನೂ ಪೂರ್ಣಗೊಂಡಿಲ್ಲ.

ವಿದ್ಯುತ್ ಅವಘಡಗಳನ್ನು ತಪ್ಪಿಸುವ ಉದ್ದೇಶದಿಂದ ಬೆಂಗಳೂರಿನಲ್ಲಿ ನೆಲದಡಿಯಲ್ಲಿ ಕೇಬಲ್‌ಗಳನ್ನು ಅಳವಡಿಸುವ ಯೋಜನೆ ಬಹುತೇಕ ಪೂರ್ಣಗೊಂಡಿದೆ ಎಂದು ಬೆಸ್ಕಾಂ ಹೇಳಿಕೊಂಡಿದೆ. ಆದರೂ ತುಂಡಾದ ಕೇಬಲ್‌ಗಳು, ವಿದ್ಯುತ್ ತಂತಿಗಳು ಹಾಗೂ ದುಃಸ್ಥಿತಿಯಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ಅನೇಕ ಪ್ರದೇಶಗಳಲ್ಲಿ ಕಾಣಬಹುದು. ನಿಗಾ ವ್ಯವಸ್ಥೆಯ ಬಲವರ್ಧನೆ, ಸಮರ್ಪಕ ನಿರ್ವಹಣೆಯ ಜೊತೆಗೆ ದೂರುಗಳಿಗೆ ತಕ್ಷಣ ಸ್ಪಂದಿಸುವ ದಕ್ಷತೆಯನ್ನು ಸಿಬ್ಬಂದಿ ರೂಢಿಸಿಕೊಂಡರೆ ಅವಘಡಗಳ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲು ಸಾಧ್ಯ. ಸಿಬ್ಬಂದಿಯ ನಿರ್ಲಕ್ಷ್ಯ ಮತ್ತು ಉಡಾಫೆ ಧೋರಣೆಯಿಂದಾಗಿ ಜನರು ಜೀವ ಕಳೆದುಕೊಳ್ಳುವಂತಹ ಸ್ಥಿತಿಯು ಅಕ್ಷಮ್ಯ.

ಬೆಂಗಳೂರಿನ ವೈಟ್‌ಫೀಲ್ಡ್ ಸಮೀಪದ ಹೋಪ್‌ಫಾರ್ಮ್ ಬಳಿ ನೆಲದ ಮೇಲೆ ಬಿದ್ದಿದ್ದ ತಂತಿಯನ್ನು ತುಳಿದು 23 ವರ್ಷ ವಯಸ್ಸಿನ ತಾಯಿ ಮತ್ತು ಒಂಬತ್ತು ತಿಂಗಳ ಹೆಣ್ಣುಮಗು ಸಾವಿಗೀಡಾದರು. 2023ರ ನವೆಂಬರ್‌ನಲ್ಲಿ ಈ ದುರಂತ ಸಂಭವಿಸಿತು, ಅಂದರೆ ಸರಿಯಾಗಿ ಒಂದು ವರ್ಷವಾಗಿದೆ. ತಮಿಳುನಾಡಿನಿಂದ ತಾಯಿಯನ್ನು ನೋಡಲು ಮಗು ಹಾಗೂ ಪತಿಯೊಂದಿಗೆ ಬಂದಿದ್ದ ದುರ್ದೈವಿ ಮಹಿಳೆ, ನೆಲದ ಮೇಲೆ ಬಿದ್ದಿದ್ದ ತಂತಿಯನ್ನು ತುಳಿದಾಗ, ವಿದ್ಯುತ್ ಪ್ರವಹಿಸುವಿಕೆಯಿಂದ ಬೆಂಕಿ ಹೊತ್ತಿಕೊಂಡಿದೆ. ಪತ್ನಿ ಹಾಗೂ ಮಗು ಕಣ್ಣೆದುರೇ ಸಾವಿಗೀಡಾಗುವುದನ್ನು ಪತಿ ಅಸಹಾಯಕತೆಯಿಂದ ನೋಡುವಂತಹ ಸ್ಥಿತಿ ಯಾರಿಗೂ ಬರಬಾರದು. ಇಂತಹ ದುರಂತಗಳು ಮರುಕಳಿಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸಿಬ್ಬಂದಿ ಪಣತೊಡಬೇಕು. ಜನರ ತೆರಿಗೆ ಹಣದಿಂದ ಸಂಬಳ–ಸವಲತ್ತು ಪಡೆಯುವ ಸಿಬ್ಬಂದಿಯಿಂದ ಇಂತಹ ಬದ್ಧತೆಯನ್ನು ನಿರೀಕ್ಷಿಸುವುದು ತಪ್ಪಲ್ಲ, ಅಲ್ಲವೇ?

■ ಎನ್. ಉದಯಕುಮಾರ್